2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ102/2016

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವನಜಾಕ್ಷಿ | ಪಿಡಬ್ಲ್ಯೂ- 1 |
| ಗಂಡನ ಹೆಸರು | - | ಪರಶುರಾಮ | ಸಿಡಬ್ಲ್ಯೂ- 1 |
| ವಯಸ್ಸು | - | 50 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಶಾಂತಿನಗರ, ಬೆಂಗಳೂರು | |

ದಿನಾಂಕಃ 26-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯು ನನ್ನ ಅಳಿಯ ಮತ್ತು 2 ನೇ ಆರೋಪಿಯು 1 ನೇ ಆರೋಪಿಯ ತಾಯಿ. ನನಗೆ 3 ಜನ ಮಕ್ಕಳು. ಅದರಲ್ಲಿ ಒಬ್ಬ ಗಂಡು ಮಗನಿದ್ದು ಇಬ್ಬರು ಹೆಣ್ಣು ಮಕ್ಕಳು. ನಾನು ಮತ್ತು ನನ್ನ ಮಗ ಕೂಲಿ ಕೆಲಸ ಮಾಡುತ್ತೇವೆ. ನಾನು ಮೊದಲಿಗೆ ಮಂಗಳೂರಿನಲ್ಲಿ ವಾಸವಾಗಿದ್ದೆ. ನನ್ನ ದೊಡ್ಡ ಮಗಳ ಹೆಸರು ಸುಧಾ , ಸಣ್ಣವಳ ಹೆಸರು ಅನಿತಾ ಹಾಗೂ ಮಗನ ಹೆಸರು ಸಂತೋಷ.

2. ನಾವು ಮಂಗಳೂರಿನಲ್ಲಿ ವಾಸವಾಗಿದ್ದಾಗ ಸುಮಾರು 4 ವರ್ಷಗಳ ಹಿಂದೆ ಮಂಗಳೂರಿನಲ್ಲಿ ದಯಾನಂದರವರ ಮನೆಯಲ್ಲಿ ನಮ್ಮ ಮತ್ತು ಆರೋಪಿತರ ಮಧ್ಯೆ ನನ್ನ ಮಗಳು ಅನಿತಾಳ ಮದುವೆ ಮಾತುಕತೆ ನಡೆದಿದೆ. ಸದರಿ ಮಾತುಕತೆಗೆ ಆರೋಪಿತರ ಕಡೆಯಿಂದ ಒಂದು ಮತ್ತು ಎರಡನೇ ಆರೋಪಿತರು ಇಬ್ಬರು ಮಾತ್ರ ಬಂದಿದ್ದರು. ನಮ್ಮ ಕಡೆಯಿಂದ ನಮ್ಮ ಭಾವನವರು ಇದ್ದರು.

3. ಮಾತುಕತೆಯ ಸಮಯದಲ್ಲಿ ಓಲೆ , ಜುಮುಕಿ, 5 ಉಂಗುರ, ಒಂದು

ನೆಕ್ಲೇಸ್ ಮತ್ತು 20,000 ರೂ.ಗಳ ನಗದು ಹಣವನ್ನು ನೀಡಬೇಕೆಂದು ಆರೋಪಿತರು ಬೇಡಿಕೆ ಇಟ್ಟಿರುತ್ತಾರೆ. ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ. ಸದರಿ ಮಾತುಕತೆಯಾದ 2 ತಿಂಗಳ ನಂತರ ಬಚ್ಚೆಯ ಅಧ್ಯಪಾಡಿ ದೇವಸ್ಥಾನದಲ್ಲಿ 1 ನೇ ಆರೋಪಿ ಮತ್ತು ನನ್ನ ಮಗಳು ಅನಿತಾ ಮದುವೆ ನಡೆದಿರುತ್ತದೆ. ಮೊದಲು ಹೇಳಿದ ಓಲೆ , ಜುಮುಕಿ, 5 ಉಂಗುರ, ಒಂದು ನೆಕ್ಲೇಸ್ ನ್ನು ನನ್ನ ಮಗಳಿಗೆ ಕೊಟ್ಟಿದ್ದು 20,000 ರೂ. ಗಳ ನಗದನ್ನು 1 ನೇ ಆರೋಪಿಗೆ ಕೊಟ್ಟಿರುತ್ತೇನೆ.

4. ಮದುವೆಯಾದ ನಂತರ ನನ್ನ ಮಗಳು ಆರೋಪಿತರೊಂದಿಗೆ ಮೊದಲಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದು , ಆ ನಂತರ ಚಿಕ್ಕಮಗಳೂರಿನ ರುದ್ರಪ್ಪನವರ ಮನೆಯಲ್ಲಿ ವಾಸವಾಗಿದ್ದರು. ನಮ್ಮ ಮಗಳು ನನಗೆ ಫೋನ್ ಮಾಡಿ ಆರೋಪಿತರಿಬ್ಬರೂ ಮಧ್ಯಪಾನ ಮಾಡುತ್ತಿದ್ದರು ಎಂದು ನನಗೆ ಹೇಳುತ್ತಿದ್ದಳು.

5. ಮದುವೆಯಾದ 1 ವರ್ಷದವರೆಗೆ ಆರೋಪಿತರು ನನ್ನ ಮಗಳನ್ನು ಚೆನ್ನಾಗಿ ನೋಡಿಕೊಂಡಿದ್ದರು. ನಂತರ ಆರೋಪಿತರಿಬ್ಬರೂ ಮಧ್ಯಪಾನ ಮಾಡುತ್ತಿದ್ದ ಬಗ್ಗೆ ಕೇಳಿದರೆ 2 ನೇ ಆರೋಪಿಯು ಇವಳ ಮಾತನ್ನೇನು ಕೇಳುವುದು ನೀನು ಕುಡಿ ಎಂದು 1 ನೇ ಆರೋಪಿಗೆ ಹೇಳುತ್ತಿದ್ದಳು. ಆರೋಪಿತರು ನನ್ನ ಮಗಳಿಗೆ ನಿನಗೆ ಸರಿಯಾಗಿ ಅಡುಗೆ ಮಾಡಲು ಬರುವುದಿಲ್ಲ ಎಂದು ಹೇಳಿ ಹೊಡೆಯುವುದು , ಬಡಿಯುವುದು ಮಾಡುತ್ತಿದ್ದರು. ನಿಮ್ಮ ಅಮ್ಮ ಏನೂ ಅಂತ ಬುದ್ದಿ ಕಲಿಸಿದ್ದಾಳೆ, ನಿನಗೆ ನಾನ್ ವೆಜ್ ಅಡಿಗೆ ಮಾಡಲು ಬರುವುದಿಲ್ಲ ಎಂದು ಬೈಯ್ಯುತ್ತಿದ್ದರು. ನಾವು ಲಿಂಗಾಯಿತರಾಗಿದ್ದು ನಾನ್ ವೆಜ್ ತಿನ್ನದೇ ಇದ್ದ ಕಾರಣ ನನ್ನ ಮಗಳಿಗೆ ನಾನ್ ವೆಜ್ ಅಡಿಗೆ ಮಾಡಲು ಬರುತ್ತಿರಲಿಲ್ಲ.

6. ನನ್ನ ಮಗಳಿಗೆ 6 ತಿಂಗಳು ಗರ್ಭಿಣಿಯಾಗಿದ್ದಾಗಲೂ ಆರೋಪಿತರು ಸದರಿ

ವಿಷಯವನ್ನು ನಮಗೆ ತಿಳಿಸಿರಲಿಲ್ಲ. ನಂತರ ಆಕೆಯೇ ನನಗೆ ಫೋನ್ ಮಾಡಿ ಹೇಳಿದಾಗ ನಮಗೆ ಖುಷಿಯಾಗಿರುತ್ತದೆ. ಆಗ ಆಕೆಯನ್ನು ನಮ್ಮ ಮನೆ ಇದ್ದ ಬೆಂಗಳೂರಿಗೆ ಕರೆದುಕೊಂಡು ಬಂದು ಒಂದು ವಾರ ನನ್ನ ಮಗಳನ್ನು ನಮ್ಮ ಮನೆಯಲ್ಲಿ ಇಟ್ಟುಕೊಂಡು ಆ ನಂತರ ಆಕೆಯನ್ನು ಪುನಃ ಆರೋಪಿತರ ಮನೆಗೆ ಕಳುಹಿಸಿರುತ್ತೇವೆ. ನನ್ನ ಮಗಳನ್ನು ಆರೋಪಿ ಸಂತೋಷನೇ ಬಂದು ಕರೆದುಕೊಂಡು ಹೋಗಿರುತ್ತಾನೆ.

7. ನಂತರ ಎರಡೂವರೆ ವರ್ಷಗಳ ಹಿಂದೆ ನನ್ನ ಮಗಳು ಅನಿತಾಳನ್ನು 24 ನೇ ತಾರೀಖಿನಂದು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ ಸದರಿ ವಿಷಯವನ್ನು ಆರೋಪಿತರು ನಮಗೆ ತಿಳಿಸಿರಲಿಲ್ಲ. ದಿನಾಂಕಃ 26 ರಂದು ನನ್ನ ಮಗಳು ಅನಿತಾ ತನ್ನ ಪಕ್ಕದ ಹಾಸಿಗೆಯಲ್ಲಿದ್ದ ರೋಗಿಯಿಂದ ಮೊಬೈಲ್ ಫೋನ್ ನ್ನು ಪಡೆದುಕೊಂಡು ನನಗೆ ಫೋನ್ ಮಾಡಿ ಆಕೆ ಆಸ್ಪತ್ರೆಯಲ್ಲಿರುವ ವಿಷಯವನ್ನು ತಿಳಿಸಿರುತ್ತಾಳೆ. ಅನಿತಾಳು ಸಂಜೆ 4.30 ರ ವೇಳೆಗೆ ಫೋನ್ ಮಾಡಿದ್ದ ಕಾರಣ ನಾವು ಬಸ್ ಹಿಡಿದು ಚಿಕ್ಕಮಗಳೂರಿಗೆ ಬರುವಾಗ ರಾತ್ರಿ 11.30 ರ ವೇಳೆಯಾಗಿದ್ದು ನಮ್ಮನ್ನು ಆಸ್ಪತ್ರೆಯ ಒಳಗೆ ಬಿಡಲಿಲ್ಲ. ಹೀಗಾಗಿ ನಾವು 1 ನೇ ಆರೋಪಿಯ ಅಣ್ಣನ ಮನೆಗೆ ಹೋಗಿದ್ದು ಅವರು ಬೆಳಿಗ್ಗೆ ಬೇಗ ಆಸ್ಪತ್ರೆಗೆ ಹೋಗುವ ಎಂದು ಹೇಳಿರುತ್ತಾರೆ.

8. ಮಾರನೇ ದಿನ ಬೆಳಿಗ್ಗೆ ಆಸ್ಪತ್ರೆಗೆ ಹೋಗಿ ನನ್ನ ಮಗಳನ್ನು ವಿಚಾರಿಸಿದಾಗ ನನ್ನ ಮಗಳು ಅನಿತಾಳು ಆರೋಪಿತರಿಬ್ಬರೂ ಆಕೆಗೆ ಮೈಕೈಗೆ ಹೊಡೆದು , ಕಾಲಿನಿಂದ ಹೊಟ್ಟೆಗೆ ಒದ್ದಿರುತ್ತಾರೆ ಎಂದು ತಿಳಿಸಿರುತ್ತಾರೆ. ಆರೋಪಿತರಿಬ್ಬರೂ ನನ್ನ ಮಗಳು ಅನಿತಾಳಿಗೆ ನಿನಗೆ ಅಡಿಗೆ ಮಾಡಲು ಬರುವುದಿಲ್ಲ ಏನು ಕಲಿಸಿದ್ದಾರೆ ಎಂದು ಹೇಳಿ ಆಕೆಗೆ ಹೊಡೆದು, ಬಡಿದು , ಹೊಟ್ಟೆಗೆ ಒದ್ದಿರುತ್ತಾರೆ. ಆರೋಪಿತರು

ಟಾಟಾ ಸುಮೋ ಸರಿ ಮಾಡಿಸಬೇಕು ಇದಕ್ಕೆ ನನ್ನಿಂದ ಹಣ ಕೇಳಿಕೊಂಡು ಬಾ ಎಂದು ಹೇಳಿ ನನ್ನ ಮಗಳಿಗೆ ಹಿಂಸೆ ಮಾಡಿರುತ್ತಾರೆ. ಆರೋಪಿತರು ನನ್ನ ಮಗಳ ಹೊಟ್ಟೆಗೆ ಒದ್ದ ಕಾರಣ ಅನಿತಾಳ ಹೊಟ್ಟೆಯಲ್ಲಿದ್ದ ಮಗು ತೀರಿ ಹೋಗಿರುತ್ತದೆ. ನಂತರ ಅನಿತಾಳಿಗೆ ಹೆರಿಗೆಯಾಗಿದ್ದು ರಕ್ತ ಸ್ರಾವವಾಗಿರುತ್ತದೆ. ಚಿಕ್ಕಮಗಳೂರಿನ ಆಸ್ಪತ್ರೆಯ ವೈಧ್ಯರು ಇಲ್ಲಿ ಆಗುವುದಿಲ್ಲ ಎಂದು ಹೇಳಿ ಹಾಸನದ ಆಸ್ಪತ್ರೆಗೆ ಬರೆದುಕೊಟ್ಟಿರುತ್ತಾರೆ. ಹಾಸನ ಆಸ್ಪತ್ರೆಯಲ್ಲಿ ಸಂಜೆ 4 ರಿಂದ 4.30 ರವರೆಗೆ ಚಿಕಿತ್ಸೆ ಮಾಡಿ ಅಲ್ಲಿ ಗರ್ಭಕೋಶ ತೆಗೆಯಬೇಕೆಂದು ಹೇಳಿರುತ್ತಾರೆ. ನಂತರ ಇಲ್ಲಿ ಆಗುವುದಿಲ್ಲ ಎಂದು ಹೇಳಿ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿರುತ್ತಾರೆ. ಹೀಗಾಗಿ ನಾವು ಅನಿತಾಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಆಸ್ಪತ್ರೆಯಲ್ಲಿ ದಾಖಲಿಸುವುದಕ್ಕೆ ಮೊದಲೇ ಅನಿತಾ ತೀರಿಕೊಂಡಿರುತ್ತಾಳೆ.

9. ಈ ಬಗ್ಗೆ ನಾನು ಹಾಸನದ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

10. ನನ್ನ ಮಗಳು ತೀರಿಕೊಂಡ ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಆಕೆಯ ಮೃತ ದೇಹದ ಪಂಚನಾಮೆಯನ್ನು ತಹಶೀಲ್ದಾರರ ಸಮಕ್ಷಮ ಜರುಗಿಸಿ ನಂತರ ಶವ ತನಿಖೆಯನ್ನು ಜರುಗಿಸಿರುತ್ತಾರೆ. ನಂತರ ಆಕೆಯ ಮೃತ ದೇಹವನ್ನು ನಾವು ಪಡೆದುಕೊಂಡು ಮುಂದಿನ ಕ್ರಮ ನೆರವೇರಿಸಿರುತ್ತೇವೆ. ನನ್ನ ಮಗಳ ಮದುವೆಯ ಫೋಟೋಗಳನ್ನು ಈಗ

ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ. ಸದರಿ ಫೋಟೋಗಳನ್ನುನಿಪಿ.2 ರಿಂದ ನಿಪಿ.4 ಎಂದು ಗುರುತಿಸಲಾಯಿತು ಹಾಗೂ ನನ್ನ ಮಗಳ ಎಂಗೇಜ್ ಮೆಂಟ್ ಸಮಯದಲ್ಲಿ ತೆಗೆದ ಫೋಟೋವನ್ನು ಈಗ ನೋಡುತ್ತಿದ್ದೇನೆ. ಸದರಿ ಫೋಟೋವನ್ನು ನಿಪಿ.5 ಎಂದು ಗುರುತಿಸಲಾಯಿತು.

11. ನನ್ನ ಮಗಳ ಮದುವೆಯ ಬಗ್ಗೆ ದೇವಸ್ಥಾನದವರು ನೀಡಿದ ಮದುವೆಯ ರಿಜಿಸ್ಟರ್ ನ ಎಕ್ಸ್ ಟ್ರ್ಯಾಕ್ಟ್ ನ್ನು ಈಗ ನೋಡುತಿತದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ.6 ಎಂದು ಗುರುತಿಸಲಾಯಿತು. ನನ್ನ ಮಗಳ ಮೃತ ದೇಹದ ಫೋಟೋವನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು. ನನ್ನ ಮಗಳಿಗೆ ಒಂದು ಮೊಬೈಲ್ ಫೋನ್ ನ್ನು ಕೊಟ್ಟಿದ್ದು ಆಕೆಯು ತನಗೆ ಆರೋಪಿತರು ಹಿಂಸೆ ನೀಡುತ್ತಿದ್ದ ವಿಚಾರವನ್ನು ಸದರಿ ಫೋನ್ ನಿಂದ ಹೇಳುತ್ತಿದ್ದಳು.

12. ಆರೋಪಿತರು ನನ್ನ ಮಗಳಿಗೆ ನಿನಗೆ ನಾನ್ ವೆಜ್ ಅಡಿಗೆ ಮಾಡಲು ಬರುವುದಿಲ್ಲ. ನಾವು ಬೇರೆಯವರ ಮನೆಯಿಂದ ಹುಡುಗಿಯನ್ನು ತಂದಿದ್ದರೆ ಕೈತುಂಬಾ ಹಣ ಸಿಗುತ್ತಿತ್ತು ಎಂದು ಹಿಂಸೆ ನೀಡುತ್ತಿದ್ದರು. ಆದರೆ ನಾವು ಇವತ್ತಲ್ಲಾ ನಾಳೆ ಸರಿ ಹೋಗುತ್ತಾರೆ ಎಂದು ನನ್ನ ಮಗಳಿಗೆ ಹೇಳಿಕೊಂಡೇ ಬರುತ್ತಿದ್ದೆವು ಹಾಗೂ 1 ನೇ ಆರೋಪಿಗೆ ಹೀಗೇಕೆ ಮಾಡುತ್ತೀಯಾ ಸ್ವಲ್ಪ ಸಮಾಧಾನ ತಂದು ಕೋ ಎಂದು ಬುದ್ದಿವಾದ ಹೇಳುತ್ತಿದ್ದೆವು.

13. ಆರೋಪಿತರು ನನ್ನ ಮಗಳಿಗೆ ಹಿಂಸೆ ಕೊಟ್ಟು ಹೊಡೆದು ಸಾಯಿಸಿದ್ದಾರೆ ಮತ್ತು ನನ್ನ ಮಗಳ ಹೊಟ್ಟೆಯಲ್ಲಿದ್ದ ಮಗುವನ್ನೂ ಸಹ ಸಾಯಿಸಿದ್ದಾರೆ. ಆರೋಪಿತರು ಕಾಲಿನಲ್ಲಿ ಒದ್ದ ಕಾರಣ ಗರ್ಭಪಾತವಾಗಿ ಮಗು ಮತ್ತು ನನ್ನ

ಮಗಳು ತೀರಿಕೊಂಡಿದ್ದಾರೆ. ಈ ಬಗ್ಗೆ ಪೊಲೀಸರಿಗೆ ನನ್ನ ಮರುಹೇಳಿಕೆಯನ್ನು ನೀಡಿದ್ದೇನೆ. ನನ್ನ ಮಗಳ ಸಾವಿಗೆ ಈಗ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರೇ ಕಾರಣರಾಗಿದ್ದಾರೆ.

ಪಾಟೀ ಸವಾಲು ಶ್ರೀ ಕೆ.ವಿ.ವೈ. ವಕೀಲರಿಂದ – ಆರೋಪಿತರ ಪರವಾಗಿ

14. 1 ನೇ ಆರೋಪಿಯ ಅಣ್ಣ ದೇವರಾಜ್ ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಅವರ ಮೂಲಕ ನಮಗೆ ಆರೋಪಿತರ ಪರಿಚಯವಾಗಿದೆ. ದೇವರಾಜ್ ಮತ್ತು ನಾವು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೆವು ಎನ್ನುವುದು ಸುಳ್ಳು, ನಾವು ಮದುವೆಯ ಮಾತುಕತೆಯ ಸಮಯದಲ್ಲಿ ಕೇಳಿದಾಗ ದೇವರಾಜ್ ಮತ್ತು ಆರೋಪಿತರು ನಾವು ಲಿಂಗಾಯಿತರ ಜಾತಿ ಎಂದು ಹೇಳಿರುತ್ತಾರೆ. ಮದುವೆಯ ಮಾತುಕತೆಯನ್ನು ದೇವರಾಜ್ ರವರು ನಮಗೆ ಪರಿಚಯವಾದ 5 ರಿಂದ 6 ತಿಂಗಳ ನಂತರ ಮಾಡಿದ್ದೇವೆ. ಆ ಸಮಯದಲ್ಲಿ 1 ನೇ ಆರೋಪಿಯೂ ಮಂಗಳೂರಿಗೆ ಕೆಲಸಕ್ಕೆ ಸೇರಿಕೊಳ್ಳಲು ಬಂದಿದ್ದಾನೆ ಎನ್ನುವುದು ಸುಳ್ಳು.

15. ಸಂಪ್ರದಾಯದ ಪ್ರಕಾರ ಗಂಡಿನ ಮನೆ ನೋಡಲು ನಾನು ಹೋಗಿದ್ದೇನೆ ಮತ್ತು ನಾನು ಒಬ್ಬಳೇ ಹೋಗಿರುತ್ತೇನೆ. ಆದರೆ ನಾನು ಆರೋಪಿತರ ಮನೆಯ ಅಕ್ಕ ಪಕ್ಕದವರ ಹತ್ತಿರ ಆರೋಪಿತರ ಜಾತಿ ಮತ್ತು ನಡವಳಿಕೆಗಳ ಬಗ್ಗೆ ವಿಚಾರಿಸಿಲ್ಲ. ನನ್ನ ಮಗಳು ಮದುವೆಯಾದ ಒಂದೂವರೆ ವರ್ಷದವರೆಗೆ ಇದ್ದಳು. ನಾನು ಸದರಿ ಒಂದೂವರೆ ವರ್ಷದಲ್ಲಿ 2 ಬಾರಿ ಆರೋಪಿತರ ಮನೆಗೆ ಹೋಗಿದ್ದೇನೆ. 1 ನೇ ಆರೋಪಿ ಮತ್ತು ನನ್ನ ಮಗಳು ಇಬ್ಬರೂ ನನಗೆ ಫೋನ್ ಮಾಡಿ ವಿಚಾರಿಸುತಿತದ್ದರು ಎನ್ನುವುದು ಸುಳ್ಳು , ಏಕೆಂದರೆ ನನಗೆ 1 ನೇ ಆರೋಪಿ

ಫೋನ್ ಮಾಡುತ್ತಿರಲಿಲ್ಲ. ನನ್ನ ಮಗಳು ಮಾತ್ರಾ ನನಗೆ ಫೋನ್ ಮಾಡಿ ವಿಚಾರಿಸುತ್ತಿದ್ದಳು. ನನ್ನ ಮಗಳು ಗರ್ಭಿಣಿಯಾದ ಮೇಲೆ ಎಷ್ಟು ಬಾರಿ ಬಂದಿದ್ದೀರಿ ಎಂದರೆ ನನಗೆ ಬರಲು ಆಗಲಿಲ್ಲ. ನನ್ನ ಮಗಳಿಗೆ 5 ತಿಂಗಳು ತುಂಬಿದ್ದಾಗ ನನ್ನ ಮಗಳು ಫೋನ್ ಮಾಡಿ ಹೇಳಿದ ಕಾರಣ ನನಗೆ ಸದರಿ ವಿಷಯ ತಿಳಿದಿದೆ.

15. ನನ್ನ ಮಗಳು ತೀರಿಕೊಳ್ಳುವ ಸಮಯದಲ್ಲಿ ಆರೋಪಿತರು ಮತ್ತು ನನ್ನ ಮಗಳು 1 ನೇ ಆರೋಪಿಯ ಅಣ್ಣ ಶ್ಯಾಮ್ ರವರ ಮನೆಯಲ್ಲಿ ವಾಸವಾಗಿದ್ದರು . ಈ ವಿಷಯವನ್ನು ನನ್ನ ಮಗಳು ನನಗೆ ಫೋನ್ ನಲ್ಲಿ ಹೇಳಿದ್ದಾಳೆ. ಶ್ಯಾಮ್ ರವರ ಮನೆಯಲ್ಲಿದ್ದಾಗ 1 ನೇ ಆರೋಪಿ ಶ್ಯಾಮ್ ಮತ್ತು ಅವರ ಹೆಂಡತಿ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ ಎನ್ನುವುದು ನಿಜ. ಸಾಕ್ಷಿ ತಾವಾಗಿಯೇ ಹೇಳುತ್ತಾರೆ ಆ ಸಮಯದಲ್ಲಿ 2 ನೇ ಆರೋಪಿ ಅವರ ಜೊತೆಯಲ್ಲಿ ಇರಲಿಲ್ಲ. 2 ನೇ ಆರೋಪಿಯು ಅವರ ಜೊತೆ ವಾಸಕ್ಕೆ ಬಂದ ನಂತರ 1 ನೇ ಆರೋಪಿಯು ಅವರ ಮಾತನ್ನು ಕೇಳಿ ಕೆಟ್ಟು ಹೋಗಿದ್ದಾರೆ ಎಂದು.

16. ನಾನು ದೂರನ್ನು ಹಾಸನ ಪೊಲೀಸ್ ಠಾಣೆಯಲ್ಲಿ ನೀಡಿದ್ದೇನೆ ಆದರೆ ದೂರು ನೀಡಿದ ಸಮಯ ನೆನಪಿಲ್ಲ. ನಿಪಿ.1 ದೂರನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ.1 ದೂರಿಗೆ ಸಹಿ ಮಾಡಲು ಹೇಳಿದಾಗ ನಾನು ಸಹಿ ಮಾಡಿದ್ದೇನೆ ಎನ್ನುವುದು ನಿಜ. ನಿಪಿ.1 ದೂರಿನಲ್ಲಿ ನಾನು "ದಿನಾಂಕ: 24-02-2016 ರಂದು ನಮ್ಮ ಅಳಿಯ ಮಗಳನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದೇವೆಂದು ದಿನಾಂಕ: 26-02-2016 ರಂದು ತಿಳಿಸಿದರು" ಎಂದು ಬರೆಸಿದ್ದೇನೆ ಎನ್ನುವುದು ಸುಳ್ಳು. ನಾನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಮಾರನೇ ದಿನ

ಹೋದಾಗ ಬೆಳಿಗ್ಗೆ 7 ಗಂಟೆಯಾಗಿತ್ತು. ಆ ಸಮಯದಲ್ಲಿ ನನ್ನ ಮಗಳು ಚೆನ್ನಾಗಿ ಮಾತನಾಡುವ ಸ್ಥಿತಿಯಲ್ಲಿದ್ದು ತನಗೆ ಹೀಗೆ ಹೀಗೆ ಹೊಡೆದರು ಎಂದು ಹೇಳಿರುತ್ತಾಳೆ. ಹಾಸನದಲ್ಲಿ ನಾನು ಪೊಲೀಸರಿಗೆ ದೂರು ನೀಡುವ ಸಮಯದಲ್ಲಿ ನನ್ನ ಮಗಳು ಅಷ್ಟಾಗಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ.

17. ನನ್ನ ಮಗಳಿಗೆ ಸರಿಯಾಗಿ ಅಡಿಗೆ ಮಾಡಲು ಬರುವುದಿಲ್ಲ ಎಂದು ಆರೋಪಿತರು ಹಿಂಸೆ ನೀಡುತ್ತಿದ್ದರು ಎನ್ನುವ ಬಗ್ಗೆ ಮತ್ತು ಅವರು ಕುಡಿದು ಗಲಾಟೆ ಮಾಡುತ್ತಿದ್ದರು ಎನ್ನುವ ಬಗ್ಗೆ ನಾವಾಗಲೀ ಅಥವಾ ನನ್ನ ಮಗಳಾಗಲೀ ಪೊಲೀಸರಿಗೆ ದೂರು ನೀಡಿಲ್ಲ. ನಾನು ಪೊಲೀಸರಿಗೆ ನೀಡಿದ ನಿಪಿ.1 ದೂರಿನಲ್ಲಿ ಆರೋಪಿತರಿಗೆ ಒಡವೆ ಮತ್ತು ಹಣವನ್ನು ಮದುವೆಯ ಸಮಯದಲ್ಲಿ ನೀಡಿದ ವಿಚಾರವನ್ನು ಹೇಳಿಲ್ಲ ಎನ್ನುವುದು ಸುಳ್ಳು . ನನ್ನ ದೂರಿನಲ್ಲಿ ಆರೋಪಿತರು ಹೆಚ್ಚಿನ ಹಣ ಕೇಳಿ ಮತ್ತು ಟಾಟಾ ಸುಮೋ ರಿಪೇರಿಗೆ ಹಣ ಕೇಳಿ ಹಿಂಸೆ ನೀಡುತ್ತಿದ್ದ ವಿಚಾರವನ್ನು ಹೇಳಿಲ್ಲ ಎನ್ನುವುದು ಸುಳ್ಳು.

18. ನಾನು ಚಿಕ್ಕಮಗಳೂರಿಗೆ ಬಂದ ದಿನ ಶ್ಯಾಮ್ ರವರನ್ನು ಅಥವಾ ಅಕ್ಕಪಕ್ಕದವರನ್ನು ನನ್ನ ಮಗಳು ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ ವಿಚಾರಿಸಿಲ್ಲ. ನನ್ನ ಮಗಳನ್ನು ಚಿಕ್ಕಮಗಳೂರು ಆಸ್ಪತ್ರೆಗೆ 1 ನೇ ಆರೋಪಿಯೇ ಸೇರಿಸಿದ್ದಾನೆ ಎನ್ನುವುದು ನಿಜ. ನನ್ನ ಮಗಳನ್ನು ಹಾಸನ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾವು ಮತ್ತು 1 ನೇ ಆರೋಪಿ ಜೊತೆಯಲ್ಲೇ ಹೋಗಿದ್ದೇವೆ. ಆಸ್ಪತ್ರೆಗಳಲ್ಲಿ ಅಗತ್ಯವಿರುವ ದಾಖಲೆಗಳಿಗೆ 1 ನೇ ಆರೋಪಿಯೇ ಸಹಿ ಮಾಡಿದ್ದಾನೆ ಎನ್ನುವುದು ನಿಜ. 1 ನೇ ಆರೋಪಿಯು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೂ ನಮ್ಮ ಜೊತೆಯಲ್ಲಿ ಬಂದಿದ್ದಾನೆ ಎನ್ನುವುದು ನಿಜ. ಆದರೆ ನನ್ನ ಮಗಳ

ಮೃತ ದೇಹವನ್ನು ಪಡೆದುಕೊಳ್ಳುವ ಸಮಯದಲ್ಲಿ 1 ನೇ ಆರೋಪಿ ಸಂತೋಷ ನಮ್ಮ ಜೊತೆಯಲ್ಲಿ ಆಸ್ಪತ್ರೆಯಲ್ಲಿ ಇದ್ದ ಎನ್ನುವುದು ಸುಳ್ಳು. ನನ್ನ ಮಗಳ ಮೃತ ದೇಹವನ್ನು ಪಡೆದುಕೊಳ್ಳುವಾಗ ನಾನು , ನನ್ನ ಹಿರಿಯ ಅಳಿಯ ಪ್ರವೀಣ, ನನ್ನ ಹಿರಿಯ ಮಗಳು ಮತ್ತು ನನ್ನ ಮಗ ಸಂತೋಷ ಮಾತ್ರಾ ಇದ್ದೆವು.

19. ನಾನು ನಿಪಿ.1 ದೂರನ್ನು ನೀಡಿದ ನಂತರ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಚಿಕ್ಕಮಗಳೂರಿಗೆ ನಮ್ಮನ್ನು ಒಮ್ಮೆ ಬರಲು ಹೇಳಿದ್ದು ಚಿಕ್ಕಮಗಳೂರಿನ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆಗ ನಾನು ಮತ್ತು ನನ್ನ ಮಗ ಚಿಕ್ಕಮಗಳೂರಿಗೆ ಬಂದಿದ್ದೆವು. ನನ್ನ ಹೇಳಿಕೆಯನ್ನು ಚಿಕ್ಕಮಗಳೂರಿನ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ.

20. ನನ್ನ ಮಗಳಿಗೆ ನಿಶ್ಯಕ್ತಿಯಿಂದ ಗರ್ಭಪಾತವಾಗಿದೆ ಎನ್ನುವುದು ಸುಳ್ಳು . ಆ ಸಮಯದಲ್ಲಿ ವೈಧ್ಯರು ಶಸ್ತ್ರ ಚಿಕಿತ್ಸೆ ಮಾಡುವಾಗ ಹೆಚ್ಚಾಗಿ ಒತ್ತಿದ ಕಾರಣ ಗರ್ಭ ಕೋಶಕ್ಕೆ ಏಟು ಬಿದ್ದು ರಕ್ತಸ್ರಾವವಾಗಿದೆ ಎನ್ನುವುದು ಸುಳ್ಳು. ನನ್ನ ಮಗಳನ್ನು 1 ಮತ್ತು 2 ನೇ ಆರೋಪಿತರು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎನ್ನುವುದು ಸುಳ್ಳು. ಮತ್ತು ಯಾವುದೇ ಹಿಂಸೆ ನೀಡುತ್ತಿರಲಿಲ್ಲ ಎನ್ನುವುದು ಸುಳ್ಳು . ಆರೋಪಿತರು ನಮ್ಮಿಂದ ಓಲೆ , ಜುಮುಕಿ, 5 ಉಂಗುರ, ಒಂದು ನೆಕ್ಲೇಸ್ ಮತ್ತು 20,000 ರೂ.ಗಳ ನಗದು ಹಣವನ್ನು ನೀಡಬೇಕೆಂದು ಕೇಳಿಲ್ಲ ಎನ್ನುವುದು ಸುಳ್ಳು ಮತ್ತು ಅವುಗಳನ್ನು ಪಡೆದುಕೊಂಡಿಲ್ಲ ಎನ್ನುವುದು ಸುಳ್ಳು. ಆರೋಪಿತರು ಏನಾದರೂ ವರದಕ್ಷಿಣೆ ಕೇಳಿದ್ದಲ್ಲಿ ಅದನ್ನು ನಾನು ನಿಪಿ.1 ದೂರಿನಲ್ಲಿ ನಮೂದಿಸುತ್ತಿದ್ದೆ ಎನ್ನುವುದು ಸಹ ಸುಳ್ಳು

21. ದೇವರಾಜರವರೊಂದಿಗೆ ನಾನು ಗಲಾಟೆ ಮಾಡಿಕೊಂಡ ಕಾರಣ ಮತ್ತು

ಅವರು ನಮ್ಮ ಮನೆಗೆ ಬರಲಿಲ್ಲ ಎನ್ನುವ ದ್ವೇಷದಿಂದ ನಾನು ಆರೋಪಿತರ ವಿರುದ್ಧ ಸುಳ್ಳುದೂರು ನೀಡಿದ್ದೇನೆ ಎನ್ನುವುದು ಸುಳ್ಳು.

22. ನನ್ನ ಮಗಳ ಶವ ಪಡೆದುಕೊಳ್ಳುವ ಸಮಯದಲ್ಲಿ ಸಂತೋಷ್ ಎಲ್ಲಿದ್ದ ಎಂದರೆ ಆ ಸಮಯದಲ್ಲಿ ಪೊಲೀಸರು ಆತನನ್ನು ವಶಕ್ಕೆ ಪಡೆದುಕೊಂಡು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿದ್ದರು. ಆರೋಪಿತರು ನನ್ನ ಮಗಳಿಗೆ ಯಾವುದೇ ಕಿರುಕುಳ ನೀಡದ ಕಾರಣ ಈ ಬಗ್ಗೆ ನಾನು ಯಾವುದೇ ಪಂಚಾಯಿತಿಯನ್ನು ನಡೆಸಿಲ್ಲ ಎನ್ನುವುದು ಸುಳ್ಳು ಹಾಗೂ ಇದೇ ಕಾರಣದಿಂದ ನಾನು ಕೇವಲ 2 ಬಾರಿ ಮಾತ್ರಾ ಆರೋಪಿತರ ಮನೆಗೆ ಬಂದಿದ್ದೇನೆ ಎನ್ನುವುದು ಸುಳ್ಳು. ನನ್ನ ಮಗಳನ್ನು ಆಸ್ಪತ್ರೆಗೆ ದಾಖಲಿಸಿದಾಗ 1 ನೇ ಆರೋಪಿಯೇ ನನಗೆ ಫೋನ್ ಮಾಡಿ ತಿಳಿಸಿದ್ದಾನೆ ಎನ್ನುವುದು ಸುಳ್ಳು. ಆರೋಪಿತರು ಏನೂ ತಪ್ಪು ಮಾಡದಿದ್ದರೂ ಸಹ ನಾನು ಅವರ ಮೇಲೆ ಸುಳ್ಳು ದೂರನ್ನು ನೀಡಿದ್ದೇನೆ ಎನ್ನುವುದು ಸುಳ್ಳು.

23. ನಾನು ಮದುವೆಯ ಸಮಯದಲ್ಲೆ 20,000 ರೂ.ಗಳನ್ನು ಖುದ್ದಾಗಿ 1 ನೇ ಆರೋಪಿಯ ಕೈಗೆ ಕೊಟ್ಟಿದ್ದೇನೆ. ಸದರಿ ನೋಟುಗಳ ಮುಖ ಬೆಲೆ ಎಂದರೆ 2,000 ರೂ. ತಲಾ 10 ನೋಟುಗಳಿದ್ದವು. ಆ ಸಮಯದಲ್ಲಿ ನನ್ನ ಮಗ ಸಂತೋಷ ನ ಹೊರತಾಗಿ ಬೇರೆ ಯಾರೂ ಇರಲಿಲ್ಲ. ನನ್ನ ಮಗಳಿಗೆ ಒಡವೆಯನ್ನು ಆಕೆಯ ಮದುವೆಯ ದಿವಸ ಹಾಕಿದ್ದೇವೆ.

24. ಆರೋಪಿತರು ನನ್ನ ಮಗಳಿಗೆ ಕೈ ನಿಂದ ಹೊಡೆದಿಲ್ಲ ಎನ್ನುವುದು ಸುಳ್ಳು ಮತ್ತು ಕಾಲಿನಿಂದ ಆಕೆಯ ಹೊಟ್ಟೆಗೆ ಒದ್ದಿಲ್ಲ ಎನ್ನುವುದು ಸುಳ್ಳು. ಆರೋಪಿತರ ಹಲ್ಲೆಯಿಂದ ನನ್ನ ಮಗಳಿಗೆ ಗರ್ಭಪಾತವಾಗಿಲ್ಲ ಎನ್ನುವುದು ಸುಳ್ಳು ಮತ್ತು ಅದರ ಪರಿಣಾಮವಾಗಿ ನನ್ನ ಮಗಳು ತೀರಿಕೊಂಡಿಲ್ಲ ಎನ್ನುವುದು ಸುಳ್ಳು. ನನ್ನ

ಮಗಳಿಗೆ ನಿಶ್ಯಕ್ತಿ ಎಂದು 1 ನೇ ಆರೋಪಿಯು ಆಕೆಯನ್ನು ಪ್ರತೀ ತಿಂಗಳು ಆಸ್ಪತ್ರೆಗೆ ತೋರಿಸುತ್ತಿದ್ದ ಎಂದರೆ ನನ್ನ ಮಗಳು ಗರ್ಭಿಣಿ ಎಂದು ಆಕೆಯನ್ನು ಆಸ್ಪತ್ರೆಗೆ ತೋರಿಸುತ್ತಿದ್ದ. ನನ್ನ ಮಗಳು ನಿಶ್ಯಕ್ತಿಯಿಂದ ಕೆಳಗೆ ಬಿದ್ದಾಗ 1 ನೇ ಆರೋಪಿಯೇ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದಾನೆ ಎನ್ನುವುದು ಸುಳ್ಳು. ಆರೋಪಿತರು ನನ್ನ ಮಗಳಿಗೆ ಮಾನಸಿಕ ಮತ್ತು ದೈಹಿಕವಾಗಿ ಯಾವುದೇ ರೀತಿಯ ಹಿಂಸೆ ನೀಡಿಲ್ಲ ಎನ್ನುವುದು ಸುಳ್ಳು.

25. ನನ್ನ ಅಳಿಯ ಪ್ರವೀಣ ಈಗ ಮಂಗಳೂರಿನ ಜೈಲಿನಲ್ಲಿದ್ದಾನೆ ಎನ್ನುವುದು ನಿಜ. ಆದರೆ ಆತನು ಕೊಲೆ ಕೇಸಿನಲ್ಲಿ ಜೈಲಿನಲ್ಲಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ಹಾಗೂ ಚಾಸಾ.5 ದಿನೇಶ ಕೂಡಾ ಕೊಲೆ ಕೇಸಿನಲ್ಲಿ ಜೈಲಿನಲ್ಲಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ.

26. ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ನನ್ನ ಮಗಳು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎನ್ನುವುದು ಸುಳ್ಳು.

ಪ್ರಶ್ನೆ ಃ ನಿಮ್ಮ ಮಗಳು ಪೊಲೀಸ್ ನವರಿಗೆ ಏನಾದರೂ ಹೇಳಿಕೆ ನೀಡಿದ್ದೀರಾ?
ಉತ್ತರಃ ಆಕೆ ಆ ಸಮಯದಲ್ಲಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಕೆ.ಎಲ್. ಅಶೋಕ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಿಸಿಕೆ